

ಫ್ಲೆಮೆಂಕೊ ಡಾನ್ಸರ್



ನಗರ ವೀಕ್ಷಣೆಗೆ ಸಾರೋಟು

ನಿಂತರೆ, ಈ ಚರ್ಚಿನ ಭಾಗವಾಗಿ, ನಾಶವಾಗದೆ ಉಳಿಸಿಕೊಂಡ ಮೀನಾರ್ ಗೋಪುರಗಳು, ಕೆಥಡ್ರೆಲ್‌ನ ಗೋಥಿಕ್ ಶೈಲಿಯ ಗೋಪುರಗಳು, ಅಲಂಕರಣ ವಿನ್ಯಾಸಗಳು, ಅಲ್ಕಜಾರ್ ದರ್ಶನ, ನಗರದ ಮನೋಹರ ದೃಶ್ಯಗಳ ಕಿರುನೋಟ ಸಾಧ್ಯವಿದ್ದು, ಮೈನವಿರೇಳಿಸುವಂತಿದೆ. ಒಳಗೆ ಪವಿತ್ರ ಏಸು, ಮೇರಿಯರ ಪ್ರಾರ್ಥನಾ ಮಂದಿರ, ಪೇಂಟಿಂಗ್‌ಗಳು, ಬ್ರಾಂಜ್ ಶಿಲ್ಪಗಳು, ಛಾವಣಿಯ ಕೆತ್ತನೆಗಳು, ಮರದ ಕೆತ್ತನೆಯ ಕಲಾಕೃತಿಗಳು, ಆಲ್ಟರ್‌ಗಳು ಬಹಳ ಸುಂದರವಿವೆ.

ಕೊಲಂಬಸ್‌ನ ಕಾಫಿನ್ ಹೊತ್ತ ಸಮಾಧಿಯೂ ಇದೆ. ಕೊಲಂಬಸ್ ಸಾಂಬಾರ ಪದಾರ್ಥಗಳಿಗಾಗಿ ಭಾರತ ಕಂಡುಹಿಡಿಯಬೇಕೆಂದು ಹೊರಟಾಗ ಸ್ಪೈನ್ ರಾಣಿಯೇ ಸಹಾಯ ಮಾಡಿದ್ದಂತೆ. ಆದರೆ ಹೊರಟವನು ಹಾದಿ ತಪ್ಪಿ ಕಂಡುಹಿಡಿದಿದ್ದು ಅಮೆರಿಕ. ಇದರಿಂದಲೇ ಸ್ಪೇನಿಗೆ ಅಮೇರಿಕಾದೊಂದಿಗೆ ಉತ್ತಮ ವಾಣಿಜ್ಯ ಸಂಬಂಧ ಹೊಂದಲು ಸಾಧ್ಯವಾಗಿ, ಕೊಲಂಬಸ್‌ಗೆ ಇಲ್ಲಿ ವಿಶೇಷ ಸ್ಥಾನಮಾನವಿದೆ.

ಪ್ಲಾಜಾ ಡಿ ಎಸ್ಪಾನಾ: ಕೆಥಡ್ರೆಲ್‌ನಿಂದ ಮುಂದಿನ ಈ ತಾಣ ಗಾತ್ರ, ವಿನ್ಯಾಸ, ವೈವಿಧ್ಯದ ಕ್ರಿಯಾತ್ಮಕತೆಯಲ್ಲಿ ಅದ್ಭುತ ಕಟ್ಟಡ ಸಂಕೀರ್ಣ. 'ಪ್ಲಾ಼ಝಾ ಡಿ ಎಸ್ಪಾನಾ'ಎಂದು ಸ್ಪೇನ್ ಭಾಷೆಯಲ್ಲಿ ಕರೆಯುವ ಈ ಸಂಕೀರ್ಣ ನಿರ್ಮಾಣವಾಗಿದ್ದು 1929ರಲ್ಲಿ. ಸ್ಪೇನ್ ಅತಿಥೇಯ ದೇಶವಾಗಿ ಕೈಗೊಂಡ, 'ಇಬೆರೊ-ಅಮೇರಿಕನ್ ಎಕ್ಸ್ಪೋ' ಪ್ರದರ್ಶನಕ್ಕೆಂದು ನಿರ್ಮಿಸಿದ ಕಟ್ಟಡ ಸಂಕೀರ್ಣವಿದು.

ಇಟ್ಟಿಗೆ -ಟೈಲ್ಸ್‌ಗಳಿಂದ ವೆನಿಸ್ಸಿನಂಥ ಕಾಲುವೆಗಳ, ಪುಟ್ಟಸೇತುವೆಗಳ, ಫೌಂಟನ್‌ಗಳ, ಸ್ಪೇನಿನ 15ಪ್ರಾಂತಗಳಲ್ಲಿ ಅತಿಥೇಯರಾದ ತಮ್ಮನ್ನು ಬಿಟ್ಟು ಉಳಿದ 14 ಪ್ರಾಂತಗಳ ಪರಿಚಯಾತ್ಮಕ ಚೌಕಗಳ, ಸೆರಾಮಿಕ್ ಕಲಾಕೃತಿಗಳ, ಸುಂದರ ವಿನ್ಯಾಸದ ಅರ್ಧಚಂದ್ರಾಕೃತಿಯ ರಚನೆಗಳ, ಗೋಥಿಕ್ ಶೈಲಿಯ ಅರಮನೆಯಂಥ ಕಟ್ಟಡಗಳ ನಿರ್ಮಾಣವಾಗಿ, ಅದರ ಅಂದ ಚಂದಕ್ಕೆ ಪ್ರವಾಸಿಗರು ಮಾತು ಹೊರಡದೆ ನಿಲ್ಲುತ್ತಾರೆ. ಇಲ್ಲಿಯ ಚಂದದ ಕಾಲುವೆಯಲ್ಲಿ ಬೋಟಿಂಗ್ ವಿಹಾರವಿದೆ.

ನಗರದಲ್ಲಿ ಎಲ್ಲಿ ನೋಡಿದರೂ ಕಿತ್ತಳೆ ಮರಗಳು ಹೇರಳವಾಗಿವೆ. ಕೆಂಪನೆಯ ಹಣ್ಣುಗಳು. ಇದರ ರುಚಿ ಕಹಿ. ಮೊದಲೆಲ್ಲ 'ಮರ್ಮಲೈಡ್' ಎನ್ನುವ ಜ್ಯಾಮ್ ತಯಾರಿಕೆಗೆ ಬ್ರಿಟನ್ನಿಗೆ ಕಳಿಸುತ್ತಿದ್ದರು, ಈಗ ಉತ್ತಮ ಗೊಬ್ಬರ ತಯಾರಿಕೆಗೆ ಉಪಯೋಗಿಸುತ್ತಾರೆ. ಹೂಗಳಿಂದ ಚರ್ಮ ಮಸಾಜಿನ ಸುಗಂಧತೈಲ ಉತ್ಪಾದಿಸುತ್ತಾರೆ; ಸುಡುವ ಬಿಸಿಲಲ್ಲಿನ ನೆರಳಿಗಾಗಿ, ಸುತ್ತ ಹರಡುವ ನವಿರು ಸುಗಂಧಕ್ಕಾಗಿ ಮರಗಳನ್ನು ಹೇರಳ ನೆಟ್ಟಿದ್ದಾರೆ.

ಸೆವಿಲ್‌ನಲ್ಲಿ ಹಲವಾರು ಮ್ಯೂಸಿಯಂಗಳಿವೆ. ಸ್ಪೇನಿನ ಮುಖ್ಯ ಮನರಂಜನೆಯಾದ 'ಬುಲ್‌ಫೈಟಿಂಗ್' ನಡೆವ ಕ್ರೀಡಾಂಗಣ, 'ಪ್ಲಾಜಾ ಡಿ ಟೋರಾಸ್' ಕೂಡ ಇದೆ. ಸ್ಪೇನಿನ ಪ್ರಸಿದ್ಧ ಚಿತ್ರಕಾರ-ಶಿಲ್ಪಿ ಪಿಕಾಸೋನ ಮ್ಯೂಸಿಯಂ ಇಲ್ಲಿ ಪ್ರಸಿದ್ಧ. ಈ ಮ್ಯೂಸಿಯಂಗೆ ಒಂದು ರೆಸ್ಟೊರೆಂಟ್ ಮೂಲಕವೇ ಹಾದು ಹೋಗಬೇಕಿದ್ದು, ಈ ರೆಸ್ಟೊರೆಂಟ್ ಕೂಡ ಒಂದು ಮ್ಯೂಸಿಯಂನಂತಿದೆ. ಇನ್ನು ನಗರದ ರಸ್ತೆಗಳು, ಚೌಕಗಳು, ಹಸಿರು ಎಲ್ಲ ಮನಸೆಳೆವ ರೀತಿಯಲ್ಲಿವೆ. ನಗರ ಸುತ್ತಲು ಸಾರೋಟು, ಸೆಗ್‌ವೇ (ಎರಡು ಚಕ್ರದ ಸ್ಕೇಟಿಂಗ್‌ನಂಥ ಸಾಧನ)ಗಳಿವೆ. ಬಸ್ಸು, ಟ್ರಾಮ್, ಮೆಟ್ರೊ ವ್ಯವಸ್ಥೆಯಿದೆ.

ಕೈಗಾರಿಕೆಯಿದ್ದರೂ ವ್ಯವಸಾಯ ಹೆಚ್ಚಿದೆ. ಡ್ರಿಂಕ್ಸ್ ಜೊತೆ ಕೊಡುವ 'ಟೇಪಸ್'ಎನ್ನುವ ಸ್ನ್ಯಾಕ್ ಇಲ್ಲಿ ಜನಪ್ರಿಯ. ಕರಿದ, ಗ್ರಿಲ್ ಮಾಡಿದ ಸೀಫುಡ್, ಮೀಟ್, ಸ್ಪಿನಾಚ್, ಕಡಲೆ, ತರಹೇವಾರಿ ಸಾಸ್-ಡೆಸ್ಸೆರ್ಟ್‌ಗಳ ಬಳಕೆ ಹೆಚ್ಚು. ಇಲ್ಲಿನ ಕರೆನ್ಸಿ ಯೂರೊ.